

**1998**ನೇ ಇಸವಿ. ಪಾಕಿಸ್ತಾನದ ಲಾಹೋರಿನಲ್ಲಿ ನಾಲ್ಕನೇ ಅಂತಾರಾಷ್ಟ್ರೀಯ ಬೊಂಬೆಯಾಟ ಉತ್ಸವ. 33 ದೇಶಗಳ ನೂರಕ್ಕೂ ಹೆಚ್ಚಿನ ತಂಡಗಳು ಭಾಗಿ. ಆಗಷ್ಟೇ ಬಾಂಬ್ ಸಿಡಿದ ಬಿಸಿಬಿಸಿ ವಾತಾವರಣ! ಕಾಸರಗೋಡಿನ (ಕೇರಳ) ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘಕ್ಕೆ ಉತ್ಸವದಲ್ಲಿ ಭಾಗವಹಿಸಲು ಆಹ್ವಾನ.

ತಂಡದ ಮುಖ್ಯಸ್ಥ ಕೆ.ವಿ.ರಮೇಶ್. ಕಡಲಾಚೆಗೆ ಜಿಗಿಯುವ ಖುಷಿ ಒಂದೆಡೆ, ಲಕ್ಷಗಟ್ಟಲೆ ವೆಚ್ಚವನ್ನು ಹೊಂದಿಸಿಕೊಳ್ಳುವ ಒತ್ತಡ ಇನ್ನೊಂದೆಡೆ. 'ನೀವು ಹೋದರೆ ಹಿಂದಿರುಗುವುದು ಅನುಮಾನ' ಎಂದು ಅನೇಕರು ಭಯದ ಬೀಜವನ್ನು ಬಿತ್ತಿದರು. ಏನೇ ಆಗಲಿ, ಭಾಗವಹಿಸುವ ನಿರ್ಧಾರ. ಆರ್ಥಿಕ ಸಹಕಾರಕ್ಕೆ ಕೇರಳ, ಕನ್ನಾಡಿನ ಸರ್ಕಾರಗಳು ಆಗಸ ನೋಡಿದುವು! ಒಂದಷ್ಟು ಸು–ಮನಸಿಗರಿಂದ ಹಣ ಹೊಂದಿಕೆ. ದೀಪಾವಳಿ ಸಮಯ. ಲಾಹೋರಿನಲ್ಲಿ ರಮೇಶ್ ತಂಡ ವಿಮಾನದಿಂದ ಇಳಿದಾಗ ಮೊದಲು ನೆನಪಾದುದು ಹಿಂದೆ ಓದಿದ ಬಾಂಬ್ ಸುದ್ದಿ! ಅದಕ್ಕೆ ಪೂರಕವಾಗಿ ಹದ್ದಿನ ಕಣ್ಣಿಟ್ಟು ಕಾಯುವ ರಕ್ಷಕಭಟ ಸಂದೋಹ. ಆತಂಕ ಗೂಡುಕಟ್ಟುವ ಮೊದಲೇ ಸಂಘಟಕರಿಂದ ಭವ್ಯ ಸ್ವಾಗತ. ಪಂಚತಾರಾ ಹೋಟೆಲಿನಲ್ಲಿ ವಸತಿ. ಭಾರತೀಯರಿಗೆ ಇಷ್ಟವಾಗುವ ತಿಂಡಿ–ತಿನಿಸು. ದೀಪಾವಳಿಯ ಸುಡುಮದ್ದು ವೈಭವ.

ಹನ್ನೊಂದು ದಿನಗಳ ಬೊಂಬೆಯಾಟ ಉತ್ಸವ. ರಮೇಶ್ ತಂಡದಿಂದ 'ಮಹಿಷಮರ್ದಿನಿ' ಯಕ್ಷಗಾನ ಆಖ್ಯಾನದ ಪ್ರದರ್ಶನ. ಕನ್ನಡದಲ್ಲಿ ಭಾಗವತಿಕೆ. ಆಂಗ್ಲದಲ್ಲಿ ಅರ್ಥಗಾರಿಕೆಯ ಭಾಷಾಂತರ. ಕಥಾನಕದಲ್ಲಿ ಬರುವ 'ಮಹಿಷಾಸುರ, ಶ್ರೀದೇವಿ, ಸಿಂಹ' ಪಾತ್ರಗಳು ಯಾ ಬೊಂಬೆಗಳು ಉತ್ಸವದ ಹೈಲೈಟ್! ಬೊಂಬೆಗಳ ಕುಣಿತ, ಲಾವಣ್ಯಕ್ಕೆ ಲಾಹೋರ್ ಮನಸೋತಿತ್ತು! ಬೊಂಬೆಗಳ ಅಂದಕ್ಕೆ ಮಾರುಹೋಗಿ ಟರ್ಕಿ ದೇಶದ ತಂಡವೊಂದು ಯಕ್ಷಗಾನ ಬೊಂಬೆಯೊಂದನ್ನು ಮೌಲ್ಯ ತೆತ್ತು ಖರೀದಿಸಿದರು. 'ಉತ್ಸವದ ಆವರಣದೊಳಗೆ ಪ್ರವೇಶಿಸಿದ ಬಳಿಕ ಅದು ಪಾಕಿಸ್ತಾನ ಎನ್ನುವುದೇ ಮರೆತುಹೋಗಿತ್ತು' ಎನ್ನುತ್ತಾರೆ ರಮೇಶ್.

ರಮೇಶ್ ಸಾರಥ್ಯದ ಕಾಸರಗೋಡಿನ (ಕೇರಳ) 'ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ'ವು ಮೊದಲ ಬಾರಿಗೆ ಕಡಲಾಚೆ ಹಾರಿದ ಆ ದಿನಮಾನಗಳಲ್ಲಿ ಕಲಾಜಗತ್ತು ಹೆಮ್ಮೆಪಟ್ಟಿತ್ತು. ಈಗ ಸಂಘಕ್ಕೆ ಮೂವತ್ತೆಂಟರ (1991) ಹರೆಯ. ಲಾಹೋರಿನ ಬಳಿಕ ದುಬೈ, ಪ್ಯಾರೀಸ್, ಯೂರೋಪಿನ ಜೆಕೋಸ್ಲಾವಿಯಾದ ಫ್ರಾಗ್, ಚೀನಾ... ಹೀಗೆ ಪಾರಂಪರಿಕ ಯಕ್ಷಗಾನದ ಬೊಂಬೆಗಳು ವಿದೇಶದಲ್ಲೂ ಕುಣಿದಿವೆ. ಭಾರತದುದ್ದಕ್ಕೂ ಯಕ್ಷಗಾನ ಕಂಪನ್ನು ಬೀರಿವೆ.

ಬೊಂಬೆಯಾಟಕ್ಕೆ ಪ್ರಾಚೀನ ಇತಿಹಾಸವಿದೆ. 1900ರ ಸುಮಾರಿಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂವತ್ತು ಬೊಂಬೆಯಾಟ ತಂಡಗಳಿದ್ದುವಂತೆ. 1981ರಲ್ಲಿ ಎಂಟಕ್ಕೆ ಇಳಿಯಿತು. 2010ರಲ್ಲಿ ಕೇವಲ ಎರಡು ಮಾತ್ರ! ಒಂದು ಬಡಗುತಿಟ್ಟು ಯಕ್ಷಗಾನದ ಉಪ್ಪಿನಕುದ್ರು ಕೊಗ್ಗ ಕಾಮತರ ತಂಡ. ಮತ್ತೊಂದು ತೆಂಕುತಿಟ್ಟಿನ ಕಾಸರಗೋಡಿನದು.

ಬೊಂಬೆಯಾಟದ ವಿನ್ಯಾಸಗಳಲ್ಲಿ ಹಲಬಗೆ. ಕೀಲು ಬೊಂಬೆಯಾಟ, ಸೂತ್ರದ ಬೊಂಬೆಯಾಟ, ನೆರಳು ಬೊಂಬೆಯಾಟ, ಶಲಾಕಾ ಬೊಂಬೆಯಾಟ, ತೊಗಲು ಗೊಂಬೆಯಾಟ... ಹೀಗೆ. ರಮೇಶರಲ್ಲಿ ಆರಂಭದ ದಿನಗಳಲ್ಲಿ ಸೂತ್ರದ ಬೊಂಬೆಗಳಿದ್ದುವು. ಅಂದರೆ ಬೊಂಬೆಯ ಕೈ, ಕಾಲುಗಳಿಗೆ ಬಿಗಿದ ಆರೇಳು ದಾರಗಳು ಬೊಂಬೆಗಳ ತಲೆಯ ಮೇಲೆ ಹಾದುಹೋಗುವಂತೆ ಮಾಡಿ, ಅದನ್ನೊಂದು ಹಿಡಿಗೆ ಬಂಧಿಸುತ್ತಾರೆ. ಹಿಡಿಯ ಆಧಾರದಲ್ಲಿ ಬೆರಳುಗಳ ಮೂಲಕ ಬೊಂಬೆಗಳ ನಿಯಂತ್ರಣ. ಸೂತ್ರಧಾರನ ಕೈಚಳಕದಂತೆ ಬೊಂಬೆಗಳಿಗೆ ಚಲನೆ.



ವಿದೇಶಕ್ಕೆ ಕೊಂಡೊಯ್ದ ಬೊಂಬೆಗಳಿಗೆ ರಮೇಶ್ ಕೃತಜ್ಞತೆ

## ಮಾನ-ಸಂಮಾನ

ರಮೇಶ್ ಕೆ.ವಿ. ಅವರ ಪಾರಂಪರಿಕ ವಿನ್ಯಾಸವೊಂದರ ಉಳಿವು ಮತ್ತು ಅಭಿವೃದ್ಧಿಗಾಗಿ ಕರ್ನಾಟಕ, ಕೇರಳ ಸರ್ಕಾರಗಳು ಪ್ರಶಸ್ತಿ ನೀಡಿವೆ. ಜೆಕೋಸ್ಲಾವಿಯಾದ 'ಬೆಸ್ಟ್ ಟ್ರೆಡಿಶನಲ್ ಪರ್ಫಾಮರ್' ಎನ್ನುವ ಅಂತರರಾಷ್ಟ್ರೀಯ ಬಿರುದು. ಕೇರಳ ಸರಕಾರದ ಆರನೇ ತರಗತಿಯ ಕನ್ನಡ ಪಠ್ಯದಲ್ಲಿ ಬೊಂಬೆಯಾಟವೂ ಒಂದು ಪಾಠವಾಗಿ ಸೇರಿದುದು ತಂಡದ ಹಿರಿಮೆ. ಗೊಂಬೆಯಾಟದ ಹತ್ತಾರು ಡಾಕ್ಯುಮೆಂಟರಿಗಳು ಆಗಿವೆ. ಕೆಲವಕ್ಕೆ ಪ್ರಶಸ್ತಿಗಳೂ ಬಂದಿವೆ.

ಜಪಾನಿನ ಸುಮಿಯೋ ಮೋರ್ಜಿರಿ ಅವರ ಯಕ್ಷಗಾನ ಸಂಬಂಧಿತ ಲೇಖನಗಳ ಜೊತೆ ಗೊಂಬೆಯಾಟವೂ ಪರಿಚಯಗೊಂಡಿದೆ. ನ್ಯೂಜಿಲೆಂಡ್‌ನ ಒಟ್ಟೊಕೊ ಯೂನಿವರ್ಸಿಟಿಯ ಸಂಶೋಧನಾ ವಿದ್ಯಾರ್ಥಿಗಳ ಜೊತೆ ಸಾಂಸ್ಕೃತಿಕ ವಿನಿಮಯ. 'ಕಲರ್ಸ್' ವಾಹಿನಿ ಆಯೋಜನೆ ಮಾಡಿದ 'ಇಂಡಿಯಾ ಗೇಟ್ ಟ್ಯಾಲೆಂಟ್' ಸ್ಪರ್ಧೆಯಲ್ಲಿ 'ಶ್ರೇಷ್ಠ ಬೊಂಬೆಯಾಟ ತಂಡ'ವಾಗಿ ಆಯ್ಕೆ. ಬೆಂಗಳೂರಿನ ಉದಯಭಾನು ಉನ್ನತ ಅಧ್ಯಯನ ಕೇಂದ್ರದ ಪ್ರಕಾಶನದಲ್ಲಿ ಉಪನ್ಯಾಸಕಿ ದೀಪಿಕಾ ಸಾವಿತ್ರಿಯವರು ರಮೇಶರ ಸಾಹಸಗಾಥೆಯನ್ನು ಅಕ್ಷರಕ್ಕಿಳಿಸಿದ್ದಾರೆ.